ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಹಾಗೂ ಎಫ್.ಟಿ.ಎಸ್.ಸಿ-**1,** ಹಾವೇರಿ
**ಎಸ್.ಸಿ. 13/2024**

PW-01

CW-01

| | |
|---|---|
| ಸಾಕ್ಷಿದಾರರ ಹೆಸರುಃ | ಜಗದೀಶ ಮೈಲಾರಪ್ಪ ಹೀರೆಕಣಗಿ |
| ವಯಸ್ಸುಃ | 53 ವರ್ಷ |
| ಉದ್ಯೋಗಃ | ಕೂಲಿ ಕೆಲಸ |
| ಹಾಲಿ ವಾಸ ಸ್ಥಳಃ | ಗೆಜ್ಜಿಹಳ್ಳಿ ತಾಃ ಹಾನಗಲ್ಲ |

ದಿನಾಂಕ**: 24.01.2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು**.**

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ

ಚಾಸಾ-7 , 9, 22 , 25 ನನ್ನ ಅಣ್ಣನ ಮಕ್ಕಳು. ಚಾಸಾ- 9 ಅಣ್ಣನ ಮಗಳು. ಚಾಸಾ-10 ನನ್ನ ಹೆಂಡತಿ. ಚಾಸಾ-6, 8, 11 ರಿಂದ 17 , 23 ಗೊತ್ತು ನಮ್ಮೂರಿನವರು. ಚಾಸಾ-24 ನನ್ನ ಅಣ್ಣ. ಆರೋಪಿತರು ಗೊತ್ತು. 2 ನೇ ಆರೋಪಿ ಈ ದಿನ ಗೈರು ಹಾಜರಾಗಿರುತ್ತಾರೆ. ನಾನು ಗಜ್ಜೆಹಳ್ಳಿ ಗ್ರಾಮ ಪಂಚಾಯಿತಿಯ ಸದಸ್ಯನಾಗಿರುತ್ತೇನೆ. 2022 ರಲ್ಲಿ ನಮ್ಮೂರಲ್ಲಿ ದ್ಯಾಮವ್ವ ದೇವತೆಯ ಜಾತ್ರೆ ಇತ್ತು. ತಾಃ 22.03.2022 ರಂದು ಜಾತ್ರೆಮೆ ನಿಮಿತ್ತ ದ್ಯಾಮವ್ವ ದೇವಿಯ ಮೂರ್ತಿಯ ಮೆರವಣಿಗೆ ಮಾಡಲು ಟ್ರ್ಯಾಕ್ಟರನ್ನು ಸಿದ್ದಪಡಿಸಿ ರಾತ್ರಿ ಮನೆಗೆ ವಾಪಸ್ಸಾಗುತ್ತಿದ್ದೆ. ರಾತ್ರಿ 10.00 ರ ಸುಮಾರಿಗೆ ಊಟ ಮಾಡಿ ಮನೆಯ ಹೊರಗಡೆ ಬಂದಾಗ 3 ಜನ ಆರೋಪಿತರು ಬೈಕನಲ್ಲಿ ನಮ್ಮ ಮನೆಗೆ ಬಂದು ನನ್ನನ್ನು ಕುರಿತು ಅವರ ಓಣಿಗೆ ನೀರು ಯಾಕೆ ಬಿಟ್ಟಿಲ್ಲ ಎಂದು ಕೇಳಿದರು. ಆಗ ನಾನು ಪಂಚಾಯತಿ ಕೊಳವೆ ಬಾವಿಯ ಮೋಟರ್ ಪಂಪಸೇಟ್ ಕೇಬಲ್ ಕಟ್ಟಾಗಿದ್ದು ಜೋಡಿಸಿದಾಗ ನೀರು ಬರುತ್ತದೆ ಎಂದು ಹೇಳಿದೆ. ಅಷ್ಟಕ್ಕೆ ಆರೋಪಿತರು ಸಿಟ್ಟಾಗಿ ನನ್ನನ್ನು ಕುರಿತು ಯಾಕೆ ಮೆಂಬರ್ ಆಗಿದಿಯಲೇ ಸೂಳೇ ಮಗನೇ ಅಂತಾ ಅವಾಚ್ಯ ಶಬ್ದಗಳಿಂದ ಬೈದು ನನ್ನ ಮೈಮೇಲೆ ಏರಿ ಬಂದು ನನ್ನ ಶರ್ಟ ಹಿಡಿದುಕೊಂಡು ಕೈಯಿಂದ ಹೊಡೆದರು. ಆಗ ನನ್ನ ಚಾಸಾ-9 ಅಣ್ಣನ ಮಗಳು ಮತ್ತು ಚಾಸಾ-10 ನನ್ನ ಹೆಂಡತಿ ಮನೆಯಿಂದ ಹೊರಗೆ ನನ್ನನ್ನು ಬಿಡಿಸಿಕೊಳ್ಳಲು ಬಂದರು. ಬಿಡಿಸಿಕೊಳ್ಳಲು ಬಂದ ಚಾಸಾ-9 , 10 ರವರಿಗೆ ಆರೋಪಿತರು ಅವರನ್ನು ಎಳೆದಾಡಿ , ಜಗ್ಗಿ ದೂಡಿದರು. ಅಷ್ಟರಲ್ಲಾಗಲೇ 1 ನೇ ಆರೋಪಿಯು ತನ್ನ ಮೋಟರ ಸೈಕಲನಲ್ಲಿದ್ದ ಬ್ಯಾಗನಲ್ಲಿದ್ದ ಚಾಕುವನ್ನು ತೆಗೆದುಕೊಂಡು ಬಂದಿದ್ದು, ಅಷ್ಟರಲ್ಲಾಗಲೇ ಚಾಸಾ-6 ರಿಂದ 8 ರವರು ಸ್ಥಳಕ್ಕೆ ಬಂದರು. 1 ನೇ ಆರೋಪಿಯು ಚಾಕುವಿನಿಂದ ಚಾಸಾ-7 ರವರಿಗೆ ಎಡ ಪಕ್ಕಡಿಗೆ ,

ಬೆನ್ನಿಗೆ ಚುಚ್ಚಿದರು. ಅದರಿಂದಾಗಿ ಚಾಸಾ-7 ರವರಿಗೆ ರಕ್ತಗಾಯವಾಗಿತ್ತು. ಬಿಡಿಸಲು ಬಂದ ಚಾಸಾ-8 ರವರಿಗೆ 1 ನೇ ಆರೋಪಿಯು ಚಾಕುವಿನಿಂದ ಬೆನ್ನಿಗೆ ಚುಚ್ಚಿ ರಕ್ತಗಾಯಪಡಿಸಿದರು. ಅಷ್ಟರಲ್ಲಾಗಲೇ ಬಿಡಿಸಲು ಬಂದ ಚಾಸಾ-6 ರವರಿಗೆ 1 ನೇ ಆರೋಪಿಯ ಚಾಕುವಿನಿಂದ ಎಡ ಕೈಗೆ ಗಾಯಪಡಿಸಿದನು. ಆಗ ಚಾಸಾ-11 ರಿಂದ 20 ರವರು ಹಾಗೂ ಇನ್ನಿತರರು ಬಂದು ನಮ್ಮನ್ನು ಸಂತೈಸಿ ಗಾಯಗೊಂಡ ಚಾಸಾ-6 ರಿಂದ 8 ರವರನ್ನು ಖಾಸಗಿ ವಾಹನದಲ್ಲಿ ಹಾನಗಲ್ಲ ಸರ್ಕಾರಿ ಆಸ್ಪತ್ರೆಗೆ ಉಪಚಾರಕ್ಕಾಗಿ ಕಳುಹಿಸಿಕೊಟ್ಟರು. ಚಾಸಾ-7, 8 ರವರನ್ನು ಹೆಚ್ಚಿನ ಉಪಚಾರಕ್ಕಾಗಿ ಹಾನಗಲ್ಲ ಸರ್ಕಾರಿ ಆಸ್ಪತ್ರೆಯಿಂದ ಹಾವೇರಿ ಜಿಲ್ಲಾಸ್ಪತ್ರೆಗೆ ಅಲ್ಲಿಂದ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ನಂತರ ನಾನು ಮಾರನೇ ದಿನ ಬೆಳಿಗ್ಗೆ ಹಾನಗಲ್ಲ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ. ನಾನು ಸಲ್ಲಿಸಿದ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯ್ತು. ನಮ್ಮೂರಿನಲ್ಲಿ ಜಾತ್ರೆಯಿದ್ದರಿಂದ ದೂರನ್ನು ತಡವಾಗಿ ಮರುದಿನ ಸಲ್ಲಿಸಿರುತ್ತೇನೆ. ಪ್ರ.ವ.ವ.ವನ್ನು ನೋಡುತ್ತಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯ್ತು. ಆರೋಪಿತರು ಬಳಸಿದ ವಾಹನದ ನಂಬರ KA-27/EJ-8339 ಕೆಂಪು ಬಣ್ಣದ ಬಜಾಜ್ ಕಂಪನಿಯದ್ದಾಗಿತ್ತು. ಆರೋಪಿತರು ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಬಂದಿದ್ದರು. ನಾನು ದೂರನ್ನು ಪಂಚಾಯತಿ ಸದಸ್ಯರು ಮತ್ತು ಇತರೆ ಹಿರಿಯರೊಂದಿಗೆ ಚರ್ಚಿಸಿ ಸಲ್ಲಿಸಿರುತ್ತೇನೆ. ಸಾಕ್ಷಿಗೆ ಎರಡು ಪೊಟೊಗಳನ್ನು ತೋರಿಸಿದಾಗ ಸದರಿ ಪೊಟೊಗಳಲ್ಲಿಆರೋಪಿತರು ಬಳಸಿದ ವಾಹನವನ್ನು ನೋಡಿ ಗುರುತಿಸಿದ್ದು ಆರೋಪಿ ಪರ ತಕರಾರು ಇಲ್ಲ ಎಂದು ಹೇಳಿದ್ದರಿಂದ ಸದರಿ ಪೊಟೊಗಳನ್ನು ನಿಪಿ-3 ರಿಂದ 5 ಎಂದು ಗುರುತಿಸಲಾಯ್ತು. 1 ನೇ ಆರೋಪಿಯು ಬಳಸಿದ ಚಾಕುವನ್ನು ಈಗ ನೋಡುತ್ತಿದ್ದು ಅದನ್ನು ಮುಮಾ-1 ಎಂದು ಗುರುತಿಸಲಾಯ್ತು.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

1 ನೇ ಆರೋಪಿಯು ಚಾಸಾ-6 ರವರ ಬಲಗೈ ಅಂಗೈಗೆ ಮುಮಾ-1 ರಿಂದ ಗಾಯ ಪಡಿಸಿದನು ಎಂದರೆ ಸರಿ. ಆರೋಪಿತರು ನನ್ನ ಹೆಂಡತಿ ಮತ್ತು ಅಣ್ಣನ ಮಗಳನ್ನು ದೂಡಾಡಿ ಅವರ ಹೆಣ್ಣು ತನದ ಮಾನಭಂಗ ಮಾಡಿರುತ್ತಾರೆ ಎಂದರೆ ಸರಿ. ಆರೋಪಿತರು ನನ್ನನ್ನು ಹೊಡೆದಿದ್ದರಿಂದ ನನಗೆ ಸಾದಾ ಗಾಯಗಳಾಗಿದ್ದವು.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u>

ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿ ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯ್ತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.